SC No.96/2021
CW-13 / PW-03

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 96/2021

ಚಾ.ಸಾಃ 13 ಪ್ರಾ.ಸಾಃ 03

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 06.01.2026

| | | |
|---|---|---|
| ಸಾಕ್ಷಿಯ ಹೆಸರು | : | ಈರಮ್ಮ |
| ಗಂಡನ ಹೆಸರು | : | ಪ್ರಭಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಮಾಡಗಿರಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ.12 - ಪ್ರಭಯ್ಯ ನನ್ನ ಗಂಡ. ಚಾಸಾ.11 – ಅಮರೇಶ ಗೊತ್ತು, ಅವರು ನಮ್ಮ ಮನೆಯ ಪಕ್ಕದಲ್ಲಿ ಇದ್ದಾರೆ. ಚಾಸಾ.11 – ಅಮರೇಶ ಇವರ ಹೆಂಡತಿ ಮೃತ ಅಮರಮ್ಮ ಇವರನ್ನು ನಾನು ನೋಡಿದ್ದೆನು. ಅವರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ನ್ಯಾಯಾಲಯದಲ್ಲಿರುವ 1, 2 ನೇ ಆರೋಪಿತರು ಗೊತ್ತಿಲ್ಲ ಮತ್ತು ನಾನು ಅವರನ್ನು ನೋಡಿಲ್ಲ.

02. ಮೃತ ಅಮರಮ್ಮ ಆಕೆಯ ಗಂಡನ ಮನೆಯಲ್ಲಿ ಮೃತಪಟ್ಟಿದ್ದಳು. ಅವಳು ಯಾವ ಕಾರಣದಿಂದ ಮೃತಪಟ್ಟಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಶವವನ್ನು ನೋಡಿದ್ದೆನೆ. ಶವದ ಮೇಲೆ ಗಾಯಗಳು ಆದ ಬಗ್ಗೆ ನನಗೆ ಗೊತ್ತಿಲ್ಲ.

03. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

04. ಮೃತ ಅಮರಮ್ಮ ಮೃತಪಡುವ 17 ದಿನಗಳ ಹಿಂದೆ ಆಕೆಯ ಮದುವೆ ಚಾಸಾ-11 ರೊಂದಿಗೆ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 20.07.2021 ರಂದು 1, 2 ನೇ ಆರೋಪಿತರು ಮೋಟಾರ್ ಸೈಕಲ್ ಮೇಲೆ ಮೃತ ಅಮರಮ್ಮಳ ಮನೆಗೆ ಬಂದಿದ್ದರು ಎನ್ನುವುದು ಸರಿಯಲ್ಲ. ಅವರು ಮೃತ ಅಮರಮ್ಮಳ ಸಂಬಂಧಿಕರು ಇರಬಹುದು ಎಂದು ನಾವು ತಿಳಿದುಕೊಂಡಿದ್ದೆವು ಎನ್ನುವುದು ಸರಿಯಲ್ಲ. ಆರೋಪಿತರು ಮೃತ ಅಮರಮ್ಮಳನ್ನು ಮೋಟಾರ್ ಸೈಕಲ್ ನಲ್ಲಿ ಹೊರಗೆ ಕರೆದುಕೊಂಡು ಹೋಗಿ ಮರಳಿ ಬಂದಿದ್ದರು ಎನ್ನುವುದು ಸರಿಯಲ್ಲ. ಸಂಜೆ 04.30 ರ ಸಮಯದಲ್ಲಿ ಚಾಸಾ-11 ಕೆಲಸದಿಂದ ಮನೆಗೆ ಬಂದನು ಎನ್ನುವುದು ಸರಿಯಲ್ಲ. ಹೊಸಬರು ಚಾಸಾ-11 ರವರ ಮನೆಗೆ ಬಂದಿದ್ದರಿಂದ ಅನುಮಾನ ಬಂದು ಚಾಸಾ-12 ರವರು ಚಾಸಾ-11 ರವರ ಮನೆಗೆ ಹೋದರು ಎನ್ನುವುದು ಸರಿಯಲ್ಲ. ಆಗ 1 ನೇ ಆರೋಪಿತನು ಮೃತ ಅಮರಮ್ಮಳಿಗೆ "ನನ್ನನ್ನು ಪ್ರೀತಿ ಮಾಡಿ ನನಗೆ ಕೈಕೊಟ್ಟು ಬಂದಿದ್ದಿ, ಯಾಕೆ ಬದುಕಿದ್ದಿ, ಏನಾದರೂ ಮಾಡಿಕೊಂಡು ಸಾಯಿ" ಎಂದು ಹೇಳಿದನು ಎನ್ನುವುದು ಸರಿಯಲ್ಲ.

05. ಆಗ 2 ನೇ ಆರೋಪಿತನು ಮೃತ ಅಮರಮ್ಮಳಿಗೆ "ಈ ರೀತಿ ನಂಬಿದವರಿಗೆ ಮೋಸ ಮಾಡಬಾರದು, ಯಾಕೆ ಬದುಕಿದ್ದಿ, ಸಾಯಿ" ಎಂದು ಹೇಳಿದನು ಎನ್ನುವುದು ಸರಿಯಲ್ಲ.

06. ಕೂಡಲೇ ಮೃತ ಅಮರಮ್ಮಳು ರೂಮಿನ ಒಳಗೆ ಹೋಗಿ ಬಾಗಿಲು ಹಾಕಿಕೊಂಡು ಸೀರೆಯಿಂದ ನೇಣುಹಾಕಿಕೊಂಡಳು ಎನ್ನುವುದು ಸರಿಯಲ್ಲ.

ನಂತರ ಆರೋಪಿತರು ಮತ್ತು ಚಾಸಾ-11 ಆಕೆಯನ್ನು ಕೆಳಗೆ ಇಳಿಸಿದಾಗ ಆಕೆಯ ಪ್ರಾಣ ಹೋಗಿತ್ತು ಎನ್ನುವುದು ಸರಿಯಲ್ಲ. ನಂತರ ನಾನು ಸ್ಥಳಕ್ಕೆ ಹೋಗಿ ಶವವನ್ನು ನೋಡಿದೆನು ಎನ್ನುವುದು ಸರಿಯಲ್ಲ.

07. ಈ ರೀತಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.2** ಎಂದು ಗುರುತಿಸಲಾಯಿತು.

08. ಆರೋಪಿತರಿಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.